(೪) ಬಾದಾಮಿತಾಲ್ಲೂಕಿನ ಐಹೊಳೆ ಸಿದ್ದನಕೊಳ ಚಿಮ್ಮಲಗಿರಸ್ತೆ ನಿರ್ಮಾಣ

ಶ್ರೀ ಎಂ.ಎಲ್.ಉಸ್ತಾದ್.—ಮಾನ್ಯ ಅಧ್ಯಕ್ಷರೆ,ಬಿಜಾಪುರ ಜಿಲ್ಲೆಯಬಾದಾಮಿ ತಾಲ್ಲೂಕಿನಲ್ಲಿ ಐಹೊಳೆ ಸಿದ್ದನಕೊಳ ಚಿಮ್ಮಲಗಿ ರಸ್ತೆ ನಿರ್ಮಾಣವು ಆರಂಭವಾಗಿ ಸುಮಾರು ಐದು ವರ್ಷಗಳಾಗಿದ್ದರೂ ಆದು ಇನ್ನೂಪೂರ್ತಿಗೊಂಡಿಲ್ಲ. ಸಿದ್ದನಕೊಳ ಮತ್ತು ಚಿಮ್ಮಲಗಿ ಮಧ್ಯ ಒಂದು ಸೇತುವೆಯನ್ನು ಈಗಾಗಲೇ ನಿರ್ಮಿಸಲಾಗಿರುವುದಾದರೂ ರಸ್ತೆ ನಿರ್ಮಾಣ ಕಾರ್ಯವು ಭೂಮಾಲೀಕರ ಆಕ್ಷೇಪಣೆಯಿಂದಾಗಿ ಸ್ಥಗಿತ ಗೊಂಡಿರುತ್ತದೆ. ರಸ್ತೆ ನಿರ್ಮಾಣಕ್ಕೆ ಅಗತ್ಯವಿರುವ ಜಮೀನನ್ನು ಭೂಸ್ವಾಧೀನ ಕಾಯಿದೆ ಪ್ರಕಾರ ಸ್ವಾಧೀನ ಪಡಿಸಬೇಕೆಂಬ ಆದೇಶವಿರುವುದಾದರೂ ಈ ಬಗ್ಗೆ ವಿಳಂಬವಾಗಿರುವುದನ್ನು ಪರಿಗಣಿಸಿದಾಗ ಸಂಬಂಧಪಟ್ಟ ಅಧಿಕಾರಿಗಳು ಭೂಮಿಾಲೀಕರ ಒತ್ತಡಕ್ಕೆ ಮಣಿದಿರುವರೆಂದು ಭಾಸವಾಗುತ್ತದೆ. ರಸ್ತೆ ನಿರ್ಮಾಣ ಕಾರ್ಯವೂ ಅಪೂರ್ಣವಾಗಿರುವುದರಿಂದ ಸ್ಥಳೀಯ ನಾಗರೀಕರಂ ತೊಂದರೆಗೀಡಾಗಿರುತ್ತಾರೆ.

ಶ್ರೀ ಬಿ. ರಾಚಯ್ಯ.—ಎಲ್ಲಿಂದೆ ಡಿಮ್ಯಾಂಡ್ ಬರುತ್ತದೆ. ಡಿಮಾಂಡ್ ಬಂದಾಗ ಇದರ ಬಗ್ಗೆ ಹೇಳಿದರೆ ಸಂಬಂಧಪಟ್ಟಮಂತ್ರಿಗಳು ಉತ್ತರ ಕೊಡುತ್ತಾರೆ. ಇದನ್ನೆಲ್ಲಾ ನಿಯಮ ೫೩ಳಿರ ಪ್ರಕಾರ ಎತ್ತಿದರೆ ಇಲ್ಲಿ ಉತ್ತರ ಕೊಡುವುದು ಕಷ್ಟವಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಒಂದು ಸಬ್ಮಿಷನ್ ಮಾಡಲುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ಪ್ರಶ್ನೆ ಕೇಳುವುದಕ್ಕೆ, ಕಾಲಿಂಗ್ ಅಟೆನ್ಷನ್ ನೋಟೀಸ್ ತರುವುದಕ್ಕೆ ಈ ತರಹ ಬೇರೆ ಮಾರ್ಗಗಳು ಇಲ್ಲ ಇಲ್ಲದಿದ್ದರೆ ನಿಯಮ ೫೩ಳಿರ ಪ್ರಕಾರ ತರಲಿ. ಈಗ್ಗೆಚನ್ನಪಟ್ಟಣದ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಅದರ ಬಗ್ಗೆ ಮಂತ್ರಿಗಳು ಉತ್ತರ ಹೇಳುತ್ತೇನೆಂದು ಹೇಳಿದ್ದಾರೆ, ಅದು ಸರಿಯಾಗಿದೆ. ಪೋಲೀಸ್ ಕಾನ್ಸ್ಟೇಬಲ್‌ನ್ನು ಟ್ರಾನ್ಸ್‌ಫರ್ ಮಾಡಿದರು. ಸಬ್‌ಇನ್ಸ್‌ಪೆಕ್ಟರ್ ಠಾಣೆಯಲ್ಲಿರಲಿಲ್ಲ ಆಸ್ಪತ್ರೆಯಲ್ಲಿ ನಾನು ಹೋಗಿದ್ದಾಗ ಡಾಕ್ಟರು ಇರಲಿಲ್ಲ. ಇಂತಹ ಪ್ರಶ್ನೆಗಳನ್ನು ನಿಯಮ ೫೩ಳಿರ ಪ್ರಕಾರ ತಂದರೆ ನಾವು ಸಂಪರ್ಕವಾದ ಉತ್ತರ ಕೊಡಂವುದಕ್ಕೆ ಆಗುವುದಿಲ್ಲ.ಆಥವಾ ನಾವು ಉತ್ತರ ತರಿಸಿ ಕೊಡುವಾಗ ಪ್ರಶ್ನೆ ಮಾಡಿದಂತಹ ಸ್ನೇಹಿತರು ಇರುವುದಿಲ್ಲ.ಸರ್ಕಾರಉತ್ತರ ಹೇಳುವಾಗ ಯಾರ್ಯಾರು ಇರಲಿಲ್ಲ ಎನ್ನುವ ಬಗ್ಗೆ ನಾನು ಒಂದು ಪಟ್ಟಿಯನ್ನು ತಯಾರು ಮಾಡಿದ್ದೇನೆ.ಇಲ್ಲಿ ಕೆಲವು ವಿಷಯಗಳ ಬಗ್ಗೆ ನಾನು ಉತ್ತರ ಕೊಡಿಸುತ್ತೇನೆ. ನಾನು ಇಲ್ಲಿ ತಮಗೆ ಉತ್ತರ ತರಿಸಿ ಕೊಡಲಾಗುವುದೆಂದು ಏನಂ ಹೇಳುತ್ತೇನೆ, ಆ ಬಗ್ಗೆ ತಕ್ಷಣವೇ ಸಂಬಂಧಪಟ್ಟ ಮಂತ್ರಿಗಳಿಗೆ ಪತ್ರಗಳನ್ನು ಬರೆಯಿಸುತ್ತಿದ್ದೇನೆ. ಆದರೆ ಆ ಯಾವ ಕಾರಣಕ್ಕೋಸ್ಕರ ನಿಯಮ ೫೩ಳಿರ ಇದೆಯೋ ಅದಂ ಉಪಯೋಗವಾಗಂತ್ತಿಲ್ಲ, ಅದರ ಫಲ ಮಾನ್ಯ ಸದಸ್ಯರಿಗೆ ದೊರಕುತ್ತಿಲ್ಲ. ಮಾನ್ಯ ಚಿನ್ನಪ್ಪನವರು ತಾವೇನು ಈಗ ನಿಯಮ ೫೩ಳಿರ ಪ್ರಕಾರ ಪ್ರಶ್ನೆ ಮಾಡಿದ್ದಾರೆ, ಅದನ್ನು ಕಾಲಿಂಗ್ ಅಟೆನ್ಷನ್ ಮೂಲಕ ಅಥವಾ ಪ್ರಶ್ನೆ ಮೂಲಕ ಕೇಳಬಹುದಾಗಿತ್ತು. ಹತ್ತು ದಿವಸಗಳಲ್ಲಿ ಉತ್ತರ ಬರುತ್ತಿತ್ತು. ನಾವು ಉತ್ತರ ಕೊಡುವುದಿಲ್ಲ ಅಂದರೆ ತಾವು ಬಿಡುವುದಿಲ್ಲ ಈಗ ತಮಗೆ ಸಮರ್ಪಕವಾದ ಉತ್ತರ ಬರುವುದಿಲ್ಲ. ನಿಯಮ ೫೩ಳಿರ ಉದ್ದೇಶ ಸಫಲವಾಗುವುದಿಲ್ಲವೆಂದು ತಮ್ಮ ಮೂಲಕ ಮಾನ್ಯ ಸದಸ್ಯರುಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ತಮ್ಮ ಕಚೇರಿಯಲ್ಲೂ ಇಂತಹದ್ದಕ್ಕೆಲ್ಲಾ ಯಾವುದು ಪ್ರಾಮುಖ್ಯ ಎಂಬುದನ್ನು ಪರಿಗಣಿಸಿ ತಾವು ಸಹ ಇಂತಹವುಗಳಿಗೆ ಕತ್ತರಿ ಪ್ರಯೋಗವನ್ನು ಬಲವಾಗಿ ಮಾಡಬೇಕೆಂದು ಹೇಳುತ್ತೇನೆ.

(೫) ನಿವೃತ್ತಿ ಶಿಕ್ಷಕರಿಗೆ ಕೊಡತಕ್ಕ ತಾತ್ಕಾಲಿಕ ಪರಿಹಾರ ಮತ್ತು ಭದ್ರಾವತಿ ಕಾರ್ಖಾನೆಯ ಕಾರ್ಮಿಕರ ಸಂಘದ ಬಗ್ಗೆ

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ನಿವೃತ್ತ ಶಿಕ್ಷಕರಿಗೆ ತಾತ್ಕಾಲಿಕ ಪರಿಹಾರ ಕೊಡುವಂತೆ ಬೇಡಿಕೆಯನ್ನಿಟ್ಟು ಅವರಿಗೆ ಸಿಗಬೇಕಾಗಿರುವ ಸಂಪೂರ್ಣ ಪರಿಹಾರ ತಾರೀಖು ೧-೮-೧೯೮೫ ರಿಂದ ಸಿಗಬೇಕೆಂಬ ಬೇಡಿಕೆಯನ್ನು ಇಟ್ಟಿರುತ್ತಾರೆ.

ನಿವೃತ್ತ ಶಿಕ್ಷಕರಿಗೆ ಕೊಡಬೇಕಾಗಿರುವ ತಾತ್ಕಾಲಿಕ ಪರಿಹಾರ ಹಾಗೂ ಇನ್ನಿತರದಂತೆ ಅವರಿಗೆ ಒದಗಬೇಕಾಗಿರುವ ಎಲ್ಲ ಸವಲತ್ತುಗಳನ್ನು ಒದಗಿಸಿಕೊಟ್ಟು ಅವರ ತೊಂದರೆಯನ್ನು ನಿವಾರಿಸುವಂತೆ ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸುತ್ತಾ ಶಿಕ್ಷಣ ಮಂತ್ರಿಗಳನ್ನು ಈ ಬಗ್ಗೆ ಹೇಳಿಕೆಯನ್ನು ನೀಡುವಂತೆ ಸರಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದಕ್ಕೆ ಉತ್ತರ ಕೊಡತಕ್ಕ ಅಗತ್ಯವಿಲ್ಲ. ಮಾನ್ಯ ಸದಸ್ಯರು ನುರಿತವರು, ಡಿಮಾಂಡ್ಸ್ ಬರುತ್ತದೆ ಆಗ ಇದನ್ನು ಪ್ರಸ್ತಾಪ ಮಾಡಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಎಂ. ಎಸ್. ಪಾಟೀಲ್.—ನಾನು ಭದ್ರಾವತಿ ಕಬ್ಬಿಣ ಕಾರ್ಖಾನೆಯ ನೌಕರರ ಸಂಘದ ಬಗ್ಗೆ ಕೇಳಿದ್ದೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ತಮ್ಮ ಔದಾರ್ಯದಿಂದಾಗಿ ಅದವಂ ಬಿಟ್ಟು ಕೊಟ್ಟಿದ್ದೀವೆ. ಮಾನ್ಯ ಮಂತ್ರಿಗಳು ಅದನ್ನು ದುರುಪಯೋಗ ಪಡಿಸಿಕೊಳ್ಳುವುದು ಸರಿಯೇ?

ಶ್ರೀ ಎ. ಲಕ್ಷ್ಮೀಸಾಗರ್ —ದುರುಪಯೋಗ ಯಾವ ಕಡೆ ಆಗುತ್ತಿದೆ ಎಂಬುದನ್ನು ಗಮನಿಸಿದರೆ ಗೊತ್ತಾಗುತ್ತದೆ. ಭದ್ರಾವತಿ ಕಬ್ಬಿಣ ಕಾರ್ಖಾನೆಯ ಕಾರ್ಮಿಕರ ಸಂಘದ ಬಗ್ಗೆ ನಿಯಮ ೩೩ರ ಪ್ರಕಾರ ಏನು ಉತ್ತರ ಕೊಡೋಣ? ಉತ್ತರ ತರಿಸಿ ಕೊಡಬೇಕಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಕಾಲಿಂಗ್ ಅಟೆನ್‌ಷನ್‌ನಲ್ಲಿ ಏನಂ ಉತ್ತರ ಕೊಡುತ್ತೀರಿ ಅದನ್ನೇ ಕೊಡಬೇಕು. ನಿಮ್ಮಲ್ಲಿ ಉತ್ತರ ಇಲ್ಲದಿದ್ದರೆ ತರಿಸಿಕೊಡುತ್ತೇನೆಂದು ಹೇಳುವುದು ಸೌಜನ್ಯ ಅದನ್ನು ಬಿಟ್ಟು ಯಾವರೀತಿ ಪ್ರಶ್ನೆ ಕೇಳಬೇಕೆಂಬುದನ್ನು ನಿಮ್ಮನ್ನು ಕೇಳಿ ಪ್ರಶ್ನೆ ಕೇಳಬೇಕೇನು ಪ್ರಶ್ನೆಗಳನ್ನು ಯಾವರೀತಿ ಕೇಳಬೇಕೆಂಬುದು ನಮಗೆ ಬಿಟ್ಟಿದ್ದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಒಂದು ಸಲ ಅಧ್ಯಕ್ಷರು ಆಲೋ ಮಾಡಿದ ಮೇಲೆ ಆದು ಸರಿಯಲ್ಲವೆಂದು ಹೇಳುವುದು ಸರಿಯಲ್ಲ. ಸರ್ಕಾರ ಉತ್ತರ ಕೊಡಲೇಬೇಕು. ನಮ್ಮ ರೈಟ್ಸನ್ನು ನಿವಂಗೆ ಕೊಶ್ಚನ್ ಮಾಡುವುದಕ್ಕೆ ಬರಂವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ತರಿಸಿ ಕೊಡುತ್ತೇನೆ. ಆಲ್ಲಿರುವ ಸಂಘಗಳಲ್ಲಿ ಪ್ರತ್ಯಾಸವಿದೆ. ಎಲೆಕ್ಷನ್ ನಡೆದಿರುವುದಿಲ್ಲ, ಮುರ್ನಾಲ್ಕು ರಾಜಕೀಯ ಪಕ್ಷಗಳು ಇರುತ್ತವೆ, ಇದು ಕೇವಲ ಕಬ್ಬಿಣ ಕಾರ್ಖಾನೆಗೆ ಸೀಮಿತವಾಗಿರುವ ಪ್ರಶ್ನೆಯಲ್ಲ. ಇದು ೩೬೫ ದಿವಸವೂ ನಡೆಯಂತಕ್ಕ ಪ್ರಶ್ನೆ.

ಅಧ್ಯಕ್ಷರು.—ಶ್ರೀ ಬಿ. ಆರ್. ನೀಲಕಂಠಪ್ಪ, ಸದಸ್ಯರು ಬಂದಿಲ್ಲ.

ಶ್ರೀ ಎಂ. ಎಸ್. ಪಾಟೀಲ್.—ನಾನು ಕೇಳಿದ ಪ್ರಶ್ನೆಯೇ ಬೇರೆ, ಮಂತ್ರಿಗಳು ಉತ್ತರ ಹೇಳಿದು ಬೇರೆ.

ಶ್ರೀ ಬಿ. ರಾಚಯ್ಯ.—ಶೂನ್ಯವೇಳೆ ಎಂದು ಲೋಕಸಭೆಯಲ್ಲಿದೆ. ಆದ್ದರಿಂದ ಇಲ್ಲಿ ಆದು ಬೇಡವೆಂದು ನಾವು ನಿಯಮ ೩೩ರ ಇರಬೇಕೆಂದು ಒಪ್ಪಿಕೊಂಡಿದ್ದೇವೆ. ಆ ಪ್ರಕಾರ ಬಹಳ ಅನಿವಾರ್ಯ ಇದ್ದರೆ ಮಾತ ಪ್ರಸ್ತಾಪ ಮಾಡಬೇಕು. ಉತ್ತರ ಕೊಡಬೇಕೆಂದು ಏನೂ ಇಲ್ಲ. ಆದರೆ ವಿಷಯಗಳನ್ನು ಪ್ರಸ್ತಾಪ ಮಾಡಂವ್ದರಿಂದ, ತಪ್ಪು ತಿಳುವಳಿಕೆ ಆಗಬಾರದೆಂದು ಉತ್ತರಗಳನ್ನು ತರಿಸಿಕೊಡುತ್ತೇವೆ.

೩೩೦ ಪಿ. ಎಂ.

ಸಾಮಾನ್ಯವಾಗಿ ಬೇರೆ ರೂಪದಲ್ಲಿ ಪ್ರಶ್ನೆಯನ್ನು ಕೆಲವು ಸಂದರ್ಭದಲ್ಲಿ ಎತ್ತುವುದಕ್ಕೆ ಅವಕಾಶ ಇದ್ದರೂ ಅವೆಲ್ಲವನ್ನೂ ೩೩ರ ಕೆಳಗೆ ತರುವುದಾದರೆ, ನವಗೆ ಉತ್ತರವನ್ನು ಒದಗಿಸಿಕೊಡುವುದಕ್ಕೆ ಕಷ್ಟವಾಗುತ್ತದೆ. ಉತ್ತರ ಕೊಟ್ಟರೂ ಸಮಾಧಾನಕರವಾದ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ಸಾಧ್ಯವಾದಷ್ಟು ಮಟ್ಟಿಗೆ ಎಷ್ಟು ಕೊಡುವುದಕ್ಕೆ ಆಗುತ್ತದೆ ಅಷ್ಟು ಉತ್ತರ ಕೊಡಲು ಪ್ರಯತ್ನ ನಾಡುತ್ತೇವೆ.

ಶ್ರೀ ಕೆ. ಎಚ್. ಪಾಟೀಲ್.—ಇದರಿಂದ ಮಾನ್ಯ ಮಂತ್ರಿಗಳಿಗೆ ತೊಂದರೆಯಾಗುವುದಾದರೆ, ನಾವು ಪುನ: ಪ್ರಶ್ನೋತ್ತರ ವೇಳೆ ಮಂಗಿದ ಮೇಲೆ ಹಿಂದೆ ಇದ್ದಂತಹ ಶೂನ್ಯ ವೇಳೆಯನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ. ರಾಚಯ್ಯ.—ನಿಯಮ ೫೩ನ್ನು ಎಷ್ಟು ಉಪಯೋಗಿಸಿಕೊಳ್ಳಬೇಕೋ ಅಷ್ಟನ್ನು ಮಾತ್ರ ಉಪಯೋಗಿಸಿಕೊಳ್ಳಿ ಎಂಬುದಾಗಿ ಮಾನ್ಯ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುತ್ತೇವೆ. ನಾವು ಸಾಧ್ಯವಾದ ಮಟ್ಟಿಗೆ ಪ್ರಯತ್ನ ಮಾಡಿ ಮಾನ್ಯ ಸದಸ್ಯರಿಗೆ ತೃಪ್ತಿಕರವಾದ ಉತ್ತರವನ್ನು ತರಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದ್ದರಿಂದ ಇದನ್ನು ಸಾಧ್ಯವಾದ ಮಟ್ಟಿಗೂ ಕಡಿಮೆ ಮಾಡಿದರೆ ಅದೇ ವೇಳೆಯಲ್ಲಿ ಇನ್ನಿತರೆ ಕಾರ್ಯ ಕಲಾಪವನ್ನು ನಡೆಸುವುದಕ್ಕೆ ಅನುಕೂಲ ವಾಗುತ್ತದೆ.

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ತಾವು ಹೇಳಿದ ಮೇಲೂ ತಾವು allow ಮಾಡಿದರೂ ಮತ್ತೆ ಅವರು ಅದನ್ನು ಪ್ರಶ್ನೆ ಮಾಡುತ್ತಿದ್ದಾರೆ. ಒಂದು ವೇಳೆ ಅದು ಅವರ ಒಟ್ಟಾರೆಯ ಅಭಿಪ್ರಾಯವಾದರೆ, ನಾವು ೩೩ನ ಕೆಳಗೆ ಯಾವುದೇ ವಿಷಯವನ್ನು ಎತ್ತುವುದೇ ಬೇಡವೆಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ.

(ಗೊಂದಲ)

ಶ್ರೀ ಕೆ. ಎಚ್. ಪಾಟೀಲ್.—ತಾವು ಈ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ನಾವು ಇಲ್ಲಿ ಪ್ರಶ್ನೆಯನ್ನು ಕೇಳಬಾರದೆ ? ಒಂದು ವೇಳೆ ಕೇಳಬಾರದು ಅನ್ನುವುದಾದರೆ, ಮಂತ್ರಿಗಳಿಗೆ ಪತ್ರ ಬರೆದರೂ ಉತ್ತರ ಬರುತ್ತದೆ. ಇಲ್ಲದಿದ್ದರೆ ಇಲಾಖೆಯ ಕಾರ್ಯದರ್ಶಿಯವರಿಗೆ ಪತ್ರ ಬರೆದರೂ ಉತ್ತರ ಬರುತ್ತದೆ. ಆದರೆ ಈ ರಾಜ್ಯದ ಜನತೆಗೆ ಶಾಸಕರಾಗಿರುವಂತಹವರು ಏನನ್ನು ಕೇಳುತ್ತಾರೆ ಅದಕ್ಕೆ ಮಂತ್ರಿಗಳಾದಂತಹವರು ಏನನ್ನು ಹೇಳುತ್ತಾರೆಂಬುದು ಗೊತ್ತಾಗಬೇಕು. ಆಡಳಿತದಲ್ಲಿ ಲೋಪದೋಷ ಇದೆ, ತಿದ್ದಿಕೊಳ್ಳಿ ಎಂಬುದಾಗಿ ನಾವು ಹೇಳಿದರೆ, ನೀವು ನಮ್ಮ ಆಡಳಿತ ಸರಿಯಾಗಿದೆ ಅಂತಹೇಳಬಹುದು. ಆದರೆ ಶಾಸನ ಸಭೆಯಲ್ಲಿ ಆ ರೀತಿ ಕೇಳುವಂತಹ ಹಕ್ಕು ನಮಗೆ ಇದೆ. ೩೩ನ ನಿಯಮದ ಕೆಳಗೆ ಯಾವುದೇ ವಿಚಾರವನ್ನು ಎತ್ತಬಾರದು ಅನ್ನುವುದಾದರೆ, ನಾವು ಪುನಃ ಶೂನ್ಯ ವೇಳೆಯನ್ನು ಉಪಯೋಗ ಮಾಡಬೇಕಾಗುತ್ತದೆ.

೬) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತಿಕ್ರಮಣ ಮಾಡಿದ ಜಮೀನುಗಳನ್ನು ಸಕ್ರಮ ಗೊಳಿಸುವ ಬಗ್ಗೆ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೆ, ಹಲವಾರು ವರ್ಷಗಳಿಂದ ದರಖಾಸ್ತಿಗೆ ಅರ್ಜಿ ಹಾಕಿ ಅದು ಪಂಜೂರಾಗದಿದ್ದರೂ. ಅಕ್ರಮಣ ಮಾಡಿ ಕೃಷಿ ಮಾಡುವ ಸಹಸ್ರಾರು ಜನ ಭೂ ರಹಿತರು ಮತ್ತು ರೈತರು ದಕ್ಷಿಣ ಕನ್ನಡ ಮತ್ತು ಇತರೆ ಜಿಲ್ಲೆಗಳಲ್ಲಿದ್ದಾರೆ. ಅಕ್ರಮಣವನ್ನು ಸಕ್ರಮೀಕರಣ ಗೊಳಿಸಲಾಗುವುದೆಂದು ಮಾನ್ಯ ಕಂದಾಯ ಮಂತ್ರಿಗಳು ಕಳೆದ ವರ್ಷವೇ ಹೇಳಿದ್ದರೂ ಈ ತನಕ ಆ ಕುರಿತು ಯಾವುದೇ ಕ್ರಮ ಕೈಗೊಂಡಿಲ್ಲ. ಅದರ ಬದಲಾಗಿ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಕಳೆದ ವರ್ಷದ ತನಕ ವಿಧಿಸುತ್ತಿದ್ದ ದಂಡ ತೀರ್ವೆಯ ೧೦ ರಿಂದ ೧೫ ಪಟ್ಟು ದಂಡ ವಿಧಿಸಲಾಗುತ್ತಿದೆ. ಕೆಲವು ರೈತರಿಗೆ ಇದರಿಂದ ಸಹಸ್ರಾರು ರೂಪಾಯಿಗಳ ನಷ್ಟವಾಗುತ್ತದೆ. ಕೆಲವು ಅರ್ಜಿ ಪಡೆದು, ಆಳತ ಮಾಡಿಸಿ ಮಂಜೂರಾತಿ ಹಂತದಲ್ಲಿರುವವರು ಹಾಗೂ ಇತರರು ಇದರಿಂದ ತೀವ್ರ ಅನ್ಯಾಯ ಹಾಗೂ ಆತಂಕಕ್ಕೊಳಗಾಗಿದ್ದಾರೆ. ಕೃಷಿಗಾಗಿ ಭೂಮಿ ನೀಡಿ ಪ್ರೋತ್ಸಾಹಿಸುವ ಬದಲು ದಂಡ ವಿಧಿಸಿ ಭೂಮಿ ತೆರವು ಮಾಡುವ ನೋಟೀಸು ನೀಡಲಾಗುತ್ತಿದೆ. ಅಕ್ರಮಕಾರವನ್ನು ತೆರವು ಮಾಡಿಸಬಾರದು. ಅಪೇಕ್ಷಿತ ಭೂಮಿ ಕೂಡಲೇ ದರಖಾಸ್ತಿಗೆ ನೀಡಬೇಕು ಮತ್ತು ವಿಧಿಸಿದ ವಿಪರೀತ ದಂಡವನ್ನು ಕೂಡಲೇ ವಿನಾಯಿತಿಗೊಳಿಸಬೇಕು ಎಂದು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.

ಹಲವಾರು ವರ್ಷಗಳಿಂದ ಸರ್ಕಾರಿ ಜಮೀನನ್ನು ಬಗರ್ ಹುಕುಂ ಸಾಗುವಳಿ ಮಾಡಿ ದರಖಾಸ್ತಿಗೆ ಅರ್ಜಿ ಹಾಕಿ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಲು ಕೋರಿರುವುದು ಸರಿಯಷ್ಟೇ. ಆದರಂತೆ ಸರ್ಕಾರಿ ಜಮೀನನ್ನು ಬಗರ್ ಹುಕುಂ ಸಾಗುವಳಿ ಮಾಡಿರುವಂತಹ ಹರಿಜನ, ಗಿರಿಜನ, ಭೂರಹಿತರ, ಭೂ ಕಾರ್ಮಿಕರು, ಸಣ್ಣ ಹಾಗೂ ಅತಿ ಸಣ್ಣ ರೈತರುಗಳು ಕಾನೂನಾತ್ಮಕ ರೀತ್ಯ ಸಕ್ರಿಯಗೊಳಿಸುವ